<u>1 ನೇ ಅಪರ  ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ</u>
<u>ಎಸ್.ಸಿ. ನಂ.17/2022</u>

<u>ದಿನಾಂಕ ಃ 16.10.2024  ರಂದು ಪ್ರಮಾಣ ವಚನ ಬೋದಿಸಲಾಗಿದೆ.</u>

**<u>ಮುಂದುವರೆದ  ಮುಖ್ಯ ವಿಚಾರಣೆಃ ಮಾನ್ಯ  ಸರ್ಕಾರಿ ಅಭಿಯೋಜಕರಿಂದಃ</u>**

1)    ನಾನು ಎಫ್ ಎಲ್  ಎಲ್ ಗೆ ಕಳುಹಿಸಿದ  ಅಸಲು ಮನವಿ  ಪತ್ರವನ್ನು ಈಗ ನ್ಯಾಯಾಲಯಕ್ಕೆ ಹಾಜರು ಪಡಿಸುತ್ತಿದ್ದು, ಅದನ್ನು ಈಗ ನೋಡುತ್ತಿದ್ದು, ನಿಪಿ.11 ಎಂದು ಗುರುತಿಸಲಾಯಿತು. ಇದಕ್ಕೆ ನಾನು ಸಹಿ ಮಾಡಿರುತ್ತೇನೆ, ನನ್ನ ಸಹಿಯನ್ನು ಈಗ ನೋಡುತ್ತಿದ್ದು, ಸಹಿಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು.  ಸದರಿ ಪತ್ರದೊಂದಿಗೆ, ಎಫ್ ಎಲ್  ಎಲ್  ವರದಿಗೆ ಕಳುಹಿಸಿದ, ಅಮಾನತ್ತು   ಪಡಿಸಿಕೊಂಡ ವಸ್ತುಗಳಾದ 1) ಕುಡ್ಲು (ಕುಡಗೋಲು) ನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ಮುಮಾ.2 ಎಂದು ಗುರುತಿಸಲಾಗಿದೆ.  ಮುಮಾ.2 - ಇದ್ದ ಚೀಲದ ಮೇಲೆ ಅಂಟಿಸಿರುವ  ಚೀಟಿಯಲ್ಲಿ  ಇರುವ  ನನ್ನ ಸಹಿಯನ್ನು ನೋಡುತ್ತಿದ್ದು, ಅದನ್ನು ಮುಮಾ.2(ಡಿ) ಎಂದು ಗುರುತಿಸಲಾಯಿತು. ನಮ್ಮ ಪೊಲೀಸ್ ಸಿಬ್ಬಂದಿ  ಚಾಸಾ.10 ರವರ ಹೇಳಿಕೆಯನ್ನು ಮಾಡಿಕೊಂಡೆನು.

**<u>ಪಾಟೀ ಸವಾಲು ಃ ಆರೋಪಿತರ ಪರ ಶ್ರೀ   ಹೆಚ್ ಕೆ ಪಿ  ವಕೀಲರಿಂದ ಃ</u>**

1)      ದಿಃ14.06.2020 ರಂದು ಪ್ರಕರಣದ ಕಡತವನ್ನು ನಾನು ಚಾಸಾ.13 ಎಎಸ್ಐ - ಮರೀಸ್ವಾಮಿ ರವರಿಂದ ಎಷ್ಟು ಗಂಟೆಗೆ ಪಡೆದುಕೊಂಡಿದ್ದೆನು ಎಂದು ನೆನಪಿರುವುದಿಲ್ಲ. ಮುಂದಿನ ತನಿಖಾಧಿಕಾರಿಗೆ, ಸದರಿ ಪ್ರಕರಣದ ಕಡತವನ್ನು ನಾನು, ದಿಃ25.02.2021 ರಂದು ವಹಿಸಿದ್ದೆನು. ಎಫ್ ಎಲ್  ಎಲ್ ವರದಿಗಾಗಿ, ನಾನು ಚಾಸಾ.10 ರವರಿಗೆ  ನಿಪಿ.11  ಪತ್ರವನ್ನು ಮತ್ತು ಇದರೊಂದಿಗೆ, ಮುಮಾ-2, ಕುಡ್ಲನ್ನು  ದಿಃ 15.06.2020 ರಂದು ಕೊಟ್ಟಿದ್ದೆನು.  ನಿಪಿ.11 ಮನವಿ ಪತ್ರದಲ್ಲಿ, ಮುಮಾ.1 ಮತ್ತು  ಮುಮಾ.2 ನ್ನು ದಿಃ25.03.2020 ರಂದು  ನಾನು ವಶಪಡಿಸಿಕೊಂಡಿದ್ದೆನು ಅಂತ ಇದೆ ಎಂದರೆ ಸರಿ.  ನಾನು ದಿಃ 25.03.2020 ರಂದು ಮುಮಾ  1 ಮತ್ತು  2  ಮುದ್ದೇಮಾಲುಗಳನ್ನು ವಶಪಡಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ ಹಾಗೂ ನಾನೇ ಇದನ್ನು ಠಾಣೆಯಲ್ಲಿ ಸೃಷ್ಟಿಸಿಕೊಂಡಿದ್ದೆನು ಎಂದರೆ ಸರಿಯಲ್ಲ.

2) ಯಾವುದೇ ಒಂದು ರಕ್ತದ ಕಲೆ ಇರುವ ಅಯುಧವನ್ನು ಅಮಾನತ್ತು ಪಡಿಸಿಕೊಂಡರೆ, ಅದನ್ನು ಅದನ್ನು ಬಿಳಿ ಬಟ್ಟೆಗೆ ಹಾಕಿ, ಅರಗಿನಿಂದ ನಿರ್ದಿಷ್ಟವಾದ ಅಕ್ಷರದಿಂದ ಸೀಲ್ ಮಾಡಿ, ಅದಕ್ಕೆ ಪಿ.ಎಫ್ ನಂಬರನ್ನು ಕೊಟ್ಟು ಕೂಡಲೇ, ವ್ಯಾಪ್ತಿಗೆ ಒಳಪಟ್ಟಿರುವ ನ್ಯಾಯಿಕ ದಂಡಾಧಿಕಾರಿಯವರಿಗೆ ನಿವೇದಿಸಿಕೊಳ್ಳಬೇಕು ಎಂದರೆ ಸರಿ. ಎಫ್ ಎಸ್ ಎಲ್ ಗೆ ಕಳುಹಿಸಿದ್ದ ಬಗ್ಗೆ ಹಿಂಬರಹವನ್ನು ಚಾಸಾ.10 ಸಿಬ್ಬಂದಿ ರವರಿದ ದಿಃ 20.06.2020 ರಂದು ಪಡೆದುಕೊಂಡೆನು. ನಾನು ಕಳುಹಿಸಿಕೊಟ್ಟಿರುವ ಮುದ್ದೆ ಮಾಲು.2 ನ್ನು, ದೂರುದಾರರಿಗೆ ಸಹಾಯ ಮಾಡುವ ಉದ್ದೇಶದಿಂದ, ಠಾಣೆಯಲ್ಲೇ ಸೃಷ್ಟಿಸಿ, ಎಫ್.ಎಸ್.ಎಲ್ ಗೆ ಕಳುಹಿಸಿ ವರದಿಯನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ವಿಚಾರ ಗೊತ್ತಿದ್ದರೂ ಸಹ, ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.